**<u>ಅಸಲು ದಾವಾ ಸಂಖ್ಯೆ-29/2015</u>** **<u>ಪಿ.ಡಬ್ಲ್ಯೂ:-</u> 1**

ದಿನಾಂಕಃ **13-01-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು:-1 ನೇ ಪ್ರತಿವಾದಿ ಪರ ವಕೀಲರಿಂದ:-</u>**

ದಾವಾ ಆಸ್ತಿಗಳಲ್ಲಿ 1 ನೇ ಪ್ರತಿವಾದಿಗೂ ಸಹ ಸಮಾನವಾದ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇದೆ ಎಂದರೆ ಸರಿ.

**<u>ಪಾಟೀ ಸವಾಲು:-2 ನೇ ಪ್ರತಿವಾದಿ ಪರ ವಕೀಲರಿಂದ:-</u>**

ಈ ದಾವೆಯನ್ನು ದಾವಾ ಆಸ್ತಿಗಳಲ್ಲಿ ನನಗೆ 1/7 ಭಾಗಾಂಶ ಕೋರಿ ದಾವೆಯನ್ನು ಸಲ್ಲಿಸಿದ್ದೇನೆ. ನನ್ನ ತಂದೆಯ ಹೆಸರು ಚನ್ನವೀರಪ್ಪಗೌಡ. ನಮ್ಮ ತಂದೆಗೆ ಒಟ್ಟು 3 ಜನ ಹೆಂಡತಿಯರು ಅಂದರೆ ಹಾಲಮ್ಮ, ಹಿರಿಯಮ್ಮ ಮತ್ತು ಬಸಮ್ಮ. 1 ನೇ ಪ್ರತಿವಾದಿ ಹಾಲಮ್ಮನ ಮಗಳು, 2 ನೇ ಪ್ರತಿವಾದಿ ಹಿರಿಯಮ್ಮನ ಮಗ ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ತಂದೆಯ 3 ನೇ ಹೆಂಡತಿ ಅವರಿಗೆ ನಾನು ಮತ್ತು ಪ್ರತಿವಾದಿ 4 ರಿಂದ 6 ಮಕ್ಕಳು ಎಂದರೆ ಸರಿ. ನಮ್ಮ ತಂದೆ, ಹಾಲಮ್ಮ ಮತ್ತು ಹಿರಿಯಮ್ಮರವರು ಯಾವಾಗ ತೀರಿಕೊಂಡಿದ್ದಾರೆ ಎಂದು ನನಗೆ ನೆನಪಿಲ್ಲ. ನಾನು ಈ ದಾವೆಯಲ್ಲಿ 1/3 ಭಾಗಾಂಶವನ್ನು ಕೇಳಲು ಮಾತ್ರ ಅರ್ಹರು ಮತ್ತು 1/7 ಭಾಗಾಂಶದ ಹಕ್ಕನ್ನು ಕೇಳಲು ಅರ್ಹರಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿಯಲ್ಲಿ ನನಗೆ 1/7 ಭಾಗಾಂಶವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ 3 ರಿಂದ 6 ರವರು ಪ್ರತಿವಾದ ಪತ್ರ ಸಲ್ಲಿಸದೇ ಇದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.